## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1527/2020

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಸುರೇಶಪ್ಪ | CW: 5 | PW: 5 |
| ತಂದೆಯ ಹೆಸರು | : | ಗೌರಪ್ಪ | | |
| ವಯಸ್ಸು | : | 69 | | |
| ವೃತ್ತಿ | : | ವ್ಯವಸಾಯ | | |
| ವಾಸಸ್ಥಳ | : | ಸುರಹೊನ್ನೆ | | |

ದಿನಾಂಕಃ 23.07.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು ಗೊತ್ತು. ಚಾಸಾ 1 ರಿಂದ 4 ಮತ್ತು 6 ರವರು ಗೊತ್ತು. 2020 ರಲ್ಲಿ ಸಂಜೆ 7.30 ಗಂಟೆ ಸಮಯದಲ್ಲಿ ಗಲಾಟೆ ಆಗುತ್ತಿತ್ತು. ನಾನು ರಸ್ತೆಯಲ್ಲಿ ಹೋಗುತ್ತಿದ್ದಾಗ ಚಾಸಾ 1 ರವರು ಚೀರಿದ್ದು ಕೇಳಿಸಿತು. ನಾನು ಮತ್ತು ಚಾಸಾ 4 ರವರು ಹೋಗಿ ಬಿಡಿಸಿರುತ್ತೇವೆ. 1 ನೇ ಆರೋಪಿಯು ಕುಡುಗೋಲಿನಿಂದ ಚಾಸಾ 1 ರವರ ತಲೆಗೆ ಹೊಡೆದ. ಚಾಸಾ 3 ರವರು ಚಾಸಾ 1 ರವರನ್ನು ನ್ಯಾಮತಿ ಸರ್ಕಾರಿ ಆಸ್ಪತ್ರೆಗೆ ನಂತರ ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗದ ಸುಬ್ಬಯ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ. ಈ ಸಂಬಂಧ ಪೊಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿಯು ಗೈರು ಹಾಜರಿದ್ದು ಆರೋಪಿಯ ಗುರುತಿಸುವಿಕೆಗಾಗಿ ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ 1 ನ್ನು ನೋಡಿ ಗುರುತಿಸಿರುತ್ತಾರೆ.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ಜಗಳ ಬಿಡಿಸಲು ಹೋದ ಚಾಸಾ 2 ರವರಿಗೆ ಆರೋಪಿಗಳು ಅವಾಚ್ಯ ಶಬ್ದಗಳಿಂದ ಬೈದು, ಚಾಸಾ 1 ಮತ್ತು 2 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. 2 ನೇ ಆರೋಪಿಯು ಚಾಸಾ 1 ರವರಿಗೆ ಕೈಕಾಲುಗಳಿಂದ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ.ಜಿ ಎಸ್ ಕೆ ವಕೀಲರಿಂದಃ-

ನಾನು ಚಾಸಾ 1 ರವರ ಚೀರಾಟವನ್ನು 100 ಅಡಿ ದೂರದಿಂದ ಕೇಳಿ ಘಟನಾ ಸ್ಥಳಕ್ಕೆ ಹೋಗಿ ಗಲಾಟೆ ಬಿಡಿಸಿದ ನಂತರ ಪುನಃ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿ. ಚೀರಾಟದ ಶಬ್ದದ ಕೇಳುವ ಮುನ್ನ ಏನು ಗಲಾಟೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಹಾಗೂ ನಾನು ಗಲಾಟೆ ನೋಡಿಲ್ಲ ಎಂದರೆ ಸರಿ. ಆರೋಪಿಗಳ ಮತ್ತು ಚಾಸಾ 1 ಮತ್ತು 2 ರವರ ನಡುವೆ ಯಾವುದೇ ಗಲಾಟೆ ಆಗಿಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. 2 ನೇ ಆರೋಪಿಯು ಮು.ಮಾ 1 ರಿಂದ ಚಾಸಾ 1 ರವರ ತಲೆಗೆ ಹೊಡೆದಿಲ್ಲ, 1 ನೇ ಆರೋಪಿಯು ಚಾಸಾ 1 ಮತ್ತು 2 ರವರಿಗೆ ಹೊಡೆದಿಲ್ಲ, ಆರೋಪಿಗಳು ಚಾಸಾ 1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಚಾಸಾ 3 ರವರು ಚಾಸಾ 1 ರವರನ್ನು ಯಾವುದೇ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ.

ನನ್ನ, ಚಾಸಾ 1 ರಿಂದ 4 ರವರ ಮನೆತನ ಗಡೆಕಟ್ಟೇರ ಮನೆತನ ಎಂದರೆ ಸರಿ. ಚಾಸಾ 2 ರವರು ನನಗೆ ಏನಾಗಬೇಕು ಎಂದರೆ ಅಣ್ಣನ ಹೆಂಡತಿ. ಚಾಸಾ 1 ಮತ್ತು 3 ರವರು ನಮ್ಮ ಅಣ್ಣನ ಮಕ್ಕಳು ಎಂದರೆ ಸರಿ. ನಾನು, ಚಾಸಾ 1 ಮತ್ತು 4 ರವರು ಈ ದಿನ ನ್ಯಾಯಾಲಯಕ್ಕೆ ಜೊತೆಯಲ್ಲಿ ಬಂದಿರುತ್ತೇವೆ ಎಂದರೆ ಸರಿ. ಈ ದಿನ ನ್ಯಾಯಾಲಯದಲ್ಲಿ ಹೇಳುವಂತೆ ಚಾಸಾ 1 ರವರು ನನಗೆ ಹೇಳಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಘಟನಾ ಸಮಯದಲ್ಲಿ ನಮ್ಮ ಮತ್ತು ಆರೋಪಿಗಳ ಮನೆಗಳು ಎಲ್ಲಿದ್ದವು ಎಂದರೆ 1000 ಅಡಿ ಅಂತರದಲ್ಲಿದ್ದವು ಎಂದು ನುಡಿಯುತ್ತಾರೆ. ಚಾಸಾ 2

ಮತ್ತು 4 ರವರ ಮನೆಗಳ ಮಧ್ಯೆ ಆರೋಪಿಗಳ ಮನೆ ಇದೆ ಎಂದರೆ ಸರಿ. ಚಾಸ 2 ಮತ್ತು 4 ರವರ ಮನೆ ಹಿತ್ತಲ ನಡುಗೆ ಆರೋಪಿಗಳ ಮನೆ ಹಿತ್ತಲು ಇದೆ ಎಂದರೆ ಸರಿ. ಆರೋಪಿಗಳ ಹಿತ್ತಲು ಜಾಗ ಕಬಳಿಸುವ ಉದ್ದೇಶದಿಂದ ಚಾಸಾ 1 ರವರ ಸುಳ್ಳು ದೂರು ನೀಡಿದ್ದರಿಂದ ಅವರ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.